**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 534/2019
ಪಿಡಬ್ಲು :2 ಸಿಡಬ್ಲು :2

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಲಗಮಣ್ಣ ಪಾಟೀಲ |
| ತಂದೆಯ ಹೆಸರು | : ಶ್ರೀ. ದುಂಡಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕೋಳಿ ಫಾರ್ಮ ಮಾಲೀಕ |
| ವಾಸ್ತವ್ಯ | : ಹುಬ್ಬರವಾಡಿ, ತಾಲೂಕುಃ ರಾಯಬಾಗ |
| ದಿನಾಂಕ | : 07-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಮಲ್ಲವ್ವ ಭಜಂತ್ರಿ, ಚಾಸಾಃ 8 ಮುತ್ತೆವ್ವ ಭಜಂತ್ರಿ, ಚಾಸಾಃ 3 ವಿನಾಯಕ ಬಡೋದೆ ನನಗೆ ಗೊತ್ತಿರುವುದಿಲ್ಲ.

2. ಈಗ 4 ವರ್ಷಗಳ ಹಿಂದೆ ನಾನು ರಾಯಬಾಗದ ಪ್ಯಾಕ್ಟರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ರಾಯಬಾಗ ಪೋಲಿಸರು ನನ್ನ ಕರೆದಿದ್ದರು, ನಾನು ಹೋಗಿದ್ದೇನು. ಪೋಲಿಸರು ನನ್ನನ್ನು ನಿಲ್ಲಿಸಿ ಪೋಟೋ ತೆಗೆದರು. ನಾನು ಪೋಲಿಸರನ್ನು ವಿಚಾರಸಿದ್ದೇನೆ ಅವರು ಏನೂ ಹೇಳಿರುವುದಿಲ್ಲ. ಪೋಲಿಸರು ಆ ಸ್ಥಳದಲ್ಲಿ ನನ್ನ ಸಹಿ ಮಾಡಿಸಿಕೊಂಡರು. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅಪರಾಧ ಸ್ಥಳದ ಪಂಚನಾಮೆ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯನ್ನು ನಿಪಿ-3 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 [ಎ] ಎಂದು ಗುರುತಿಸಲಾಯಿತು.

3. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುವನ್ನು ಜಪ್ತು ಮಾಡಿರುವುದಿಲ್ಲ. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು, ಚಾಸಾಃ 3 ರವರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಇಲ್ಲದೇ ಇರುವುದರಿಂದ ಪೋಟೋವನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 09-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

4. ದಿನಾಂಕಃ 19-02-2019 ರಂದು ಪೋಲಿಸರು ನನ್ನನ್ನು ಮಲ್ಲವ್ವ ಭಜಂತ್ರಿ ಅವರ ಗೈರಾನ ಜಮೀನಿನಲ್ಲಿರುವ ಮಲ್ಲವ್ವ ಭಜಂತ್ರಿ ಅವರು ವಾಸ ಇರುವ ಗುಡಿಸಲು ಮನೆಯ ಪಕ್ಕದಲ್ಲಿದ್ದ ದನಗಳ ಶೆಡ್ಡಿಗೆ ಕರಿಸಿದ್ದರು ಎನ್ನುವುದು ಸರಿಯಲ್ಲ. ಮಲ್ಲವ್ವ ಅವರು ಆಕೆಗೆ ಮತ್ತು ಆಕೆ ಗಂಡನಿಗೆ ಹಲ್ಲೆ ಮಾಡಿದ ಜಾಗ ಇದೆ ಎಂದು ತೋರಿಸಿದ್ದು ಪೋಲಿಸರು ಆ ಸ್ಥಳದಲ್ಲಿ ಪಂಚನಾಮೆ ಮಾಡಿದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲು ಮತ್ತು ಸೈಕಲ ಪಂಪನ ಕಬ್ಬಿನದ ಪೈಪ ಬಿದ್ದಿದ್ದು ಅದನ್ನು ಸಹ ಮಲ್ಲವ್ವ ಭಜಂತ್ರಿ ಅವರು ತೋರಿಸಿದ್ದು, ಪೋಲಿಸರು ಅದನ್ನು ಜಪ್ತಿ ಮಾಡಿದರು ಎನ್ನುವುದು ಸರಿಯಲ್ಲ. ಸಾಕ್ಷಿಗೆ ಎರಡು ಪೋಟೊ ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸದೆ ಇರುವುದರಿಂದ ಪೋಟೊವನ್ನು ಸಾಕ್ಷಿಯಾಗಿ ಗುರುತಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಚಾಸಾ-3 ವಿನಾಯಕ ಬಡೊದೆ ಅವರನ್ನು ಕೆಲಸಕ್ಕೆ ಕರೆದುಕೊಂಡು ಬರಲು ಹುಬ್ಬರವಾಡಿಗೆ ಹೋಗಿದ್ದಾಗ ಪೋಲಿಸರು ನನ್ನ ಪೋಟೊ ತೆಗೆದಿದ್ದಾರೆ ಎಂದು ಪೋಟೊವನ್ನು ಗುರುತಿಸಿದ್ದಾರೆ.

5. ಪೋಲಿಸರು ಸ್ಥಳದಲ್ಲಿ ನಿಪಿ-3 ರಂತೆ ಪಂಚನಾಮೆ ಮಾಡಿ ನಿಪಿ 3(ಎ) ಪ್ರಕಾರ ನನ್ನ ಸಹಿ ಮಾಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ

ಪಂಚನಾಮೆ ಮಾಡಿ ವಸ್ತುಗಳನ್ನು ಜಪ್ತು ಮಾಡಿಕೊಂಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು:ಶ್ರೀ.ಬಿ.ಜೆ.ಜಿ ವಕೀಲರಿಂದ ಆರೋಪಿತರ ಪರ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.